# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ: ಕಾ.ಪಾ.ಅ(ಗಾ.ನ)/ಪಿಆರ್/693 /2013–14

ಕಾರ್ಯಪಾಲಕ ಅಭಿಯಂತರರು (ಗಾಂಧಿನಗರ)ರವರ ಕಛೇರಿ
ಭಾಷ್ಯಂ ಪಾರ್ಕ್, ಸೌತ್ ಸೆಂಟ್ರಲ್ ಸ್ಟ್ರೀಟ್,
ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–20
ದಿನಾಂಕ: 13/12/2013

## ಸರಬರಾಜು ಆದೇಶ

ವಿಷಯ: ವಾರ್ಡ್ ಸಂಖ್ಯೆ: 94–ಗಾಂಧಿನಗರದಲ್ಲಿ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ ಮತ್ತು ವಿಲೇವಾರಿಗಾಗಿ ಪೌರಕಾರ್ಮಿಕರನ್ನು ಹಾಗೂ ವಾಹನಗಳನ್ನು ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ: [redacted]ನ್ಯ ಉಚ್ಚನ್ಯಾಯಾಲಯದ ರಿಟ್ ಪಿಟಿಷನ್ 24739/2013ರಂತೆ

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ: 94–ಗಾಂಧಿನಗರದಲ್ಲಿ ಇಲಾಖಾ ವತಿಯಿಂದ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯನಿರ್ವಹಿಸಲು ಪೌರಕಾರ್ಮಿಕರನ್ನು ಮತ್ತು ವಾಹನಗಳನ್ನು ಸರಬರಾಜು ಮಾಡಲು ದಿನಾಂಕ: 27–09–2013ರಂದು ಕರೆಯಲಾದ ಕೊಟೇಷನ್ ಪ್ರಕಟಣೆಯಲ್ಲಿ ಪ್ರತಿ ಮಾಹೆಗೆ ಮೆ//ಸಪ್ತಗಿರಿ ಕ್ಲೀನಿಂಗ್ ಸರ್ವಿಸಸ್ ರವರು ನಮೂದಿರುವ ದರಗಳು ರೂ. 16,21,000/–(ಹದಿನಾರು ಲಕ್ಷದ ಇಪ್ಪತ್ತೊಂದು ಸಾವಿರ ರೂಪಾಯಿಗಳು ಮಾತ್ರ)ಗಳು ಉಳಿದ ದರಗಳಿಗಿಂತ ಕಡಿಮೆ ಇದ್ದು ಹಾಗೂ ಪಾಲಿಕೆಯು ಸಿದ್ಧಪಡಿಸಿರುವ ಅಂದಾಜು ಪಟ್ಟಿಗೆ ಅನುಗುಣವಾಗಿದ್ದು, ಸದರಿ ದರಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿರುತ್ತದೆ. ಆದ್ದರಿಂದ ದಿನಾಂಕ: 01–10–2013ರಿಂದ ಮುಂದಿನ ಆದೇಶದವರೆಗೆ ಕೆಳಕಂಡ ಷರತ್ತುಗಳನ್ವಯ ಈ ಕೆಳಕಂಡಂತೆ ಅಗತ್ಯವಿರುವ ಪೌರಕಾರ್ಮಿಕರು ಮತ್ತು ವಾಹನಗಳನ್ನು ಕೂಡಲೇ ಸರಬರಾಜುಗೊಳಿಸಲು ತಿಳಿಸಿದೆ.

| Sl. No. | Particulars | Quantity | Unit Rate in Rs | Total Amount |
|---|---|---|---|---|
| 1 | Auto tippers with driver and helper | 10 | 28511.00 | 285110.00 |
| 2 | Push Cart with helper | 15 | 9330.00 | 139950.00 |
| 3 | Compactor with one driver and helper | - | - | - |
| 4 | Tipper Lorry with driver and 4 helpers | 4 | 93476.00 | 373904.00 |
| 5 | Pourakarmikas with materials including push carts for street sweeping | 66 | 9592.00 | 633072.00 |
| 6 | Additional Pourakarmikas with materials including push carts for Kasamuktha area | 10 | 9330.00 | 93300.00 |
| 7 | Pourakarmikas with material including push carts for open area cleaning | 7 | 9330.00 | 65310.00 |
| 8 | Supervisors | 3 | 10118.00 | 30354.00 |
| | TOTAL | | | 1621000.00 |

### ಷರತ್ತುಗಳು

1. ಸರಬರಾಜು ಆದೇಶ ತಲುಪಿದ ಒಂದು ವಾರದೊಳಗಾಗಿ ಕಾರ್ಮಿಕರ ಪರವಾನಗಿ ಮತ್ತು ಇ.ಎಸ್.ಐ., ಪಿ.ಎಫ್ ಮತ್ತು ವಾಹನಗಳ ನೋಂದಾಯಿತ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸುವುದು.

2. ಕಾರ್ಮಿಕರಿಗೆ ಕಡ್ಡಾಯವಾಗಿ ಕಾರ್ಮಿಕರ ಮತ್ತು ಗುತ್ತಿಗೆದಾರರ ವಂತಿಕೆ ಇ.ಎಸ್.ಐ., ಪಿ.ಎಫ್‌ಗಳನ್ನು ಪಾವತಿಸುವುದು ಹಾಗೂ ಅದರ ಪ್ರತಿಯನ್ನು ಮಾಸಿಕ ಬಿಲ್ಲಿನೊಂದಿಗೆ ಸಲ್ಲಿಸುವುದು,

3. ಗುತ್ತಿಗೆದಾರನ್ನು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳಿಗೆ ಆಗಿರಬೇಕಾದ ಕನಿಷ್ಟ ವಯಸ್ಸು 18 ವರ್ಷ ತುಂಬಿರಬೇಕು ಹಾಗೂ 55 ವರ್ಷ ಮೀರಿರಬಾರದು ಹಾಗೂ ಆರೋಗ್ಯ ಮತ್ತು ಸದೃಢ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು. 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು.

4. ನೀವು ಸರಬರಾಜು ಮಾಡುವ ವಾಹನಗಳು ಉತ್ತಮ ಸ್ಥಿಯಲ್ಲಿರಬೇಕು ಹಾಗೂ ವಾಹನಗಳ ರಿಪೇರಿಯ ಜವಾಬ್ದಾರಿ ನಿಮ್ಮದೇ ಆಗಿರುತ್ತದೆ.

5. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲು ಹೊದಿಕೆ (ಏಪ್ರಾನ್) ಹಾಗೂ ಅಗತ್ಯ ಸಲಕರಣೆಗಳನ್ನು ಒದಗಿಸತಕ್ಕದ್ದು.

6. ವಾಹನಗಳು ಹಾಗೂ ಪೌರಕಾರ್ಮಿಕರು ಕೆಲಸ ನಿರ್ವಹಿಸುವ ಸಮಯದಲ್ಲಿ ಹಾಗೂ ಇನ್ನಿತರೆ ಸಮಯದಲ್ಲಿ ಅಪಘಾತ/ಅವಗಡ ಸಂಭವಿಸಿದ್ದಲ್ಲಿ ಅದಕ್ಕೆ ನೀವೇ ನೇರ ಜವಾಬ್ದಾರರಾಗಿರುತ್ತೀರಿ.

7. ಕೆಲಸ ಸಮಯ ಬಗೆಗೆ ಪರಿಸರ ಅಧಿಕಾರಿ, ಗಾಂಧೀನಗರ ಉಪ – ವಿಭಾಗ ರವರ ನಿರ್ದೇಶನದನ್ವಯ ಕಾರ್ಯನಿರ್ವಹಿಸುವುದು.

8. ಸ್ವಚತಾ ಕೆಲಸಕ್ಕೆ ಪೌರಕಾರ್ಮಿಕರು ಮತ್ತು ವಾಹನಗಳು ಗೈರುಹಾಜರಾದಲ್ಲಿ ಮಾಸಿಕ ಮೊತ್ತದ ಬಿಲ್ಲಿನಲ್ಲಿ ಕಟಾವು ಮಾಡಲಾಗುವುದು.

9. ಸಾರ್ವಜನಿಕರಿಂದ ಯಾವುದೇ ದೂರು ಬರದಂತೆ ನೋಡಿಕೊಳ್ಳುವುದು.

10. ವಾಹನದ ಮುಂದೆ ವಾಹನದ ಸಂಖ್ಯೆ: ವಾರ್ಡ್ ಸಂಖ್ಯೆ, ವಲಯದ ಹೆಸರು ಹಾಗೂ ಬಿ.ಬಿ.ಎಂ.ಪಿ. ತ್ಯಾಜ್ಯ ಸಾಗಣೆ ಆಟೋ/ಲಾರಿ/ಕಾಂಪ್ಯಾಕ್ಟ್ ಎಂದು ಮುಂದುಗಡೆ ಕಡ್ಡಾಯವಾಗಿ ಬರೆಯಬೇಕು.

11. ಪ್ರತಿನಿತ್ಯ ಈ ವಾರ್ಡಿನಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯ ವಸ್ತುಗಳನ್ನು ಹಸಿ ಕಸ, ಒಣ ಕಸ ಮತ್ತು ನೈರ್ಮಲ್ಯ ಕಸ ಇತ್ಯಾದಿಯಾಗಿ ಪ್ರತ್ಯೇಕವಾಗಿ ಸಂಗ್ರಹಿಸಿ ಪ್ರತ್ಯೇಕವಾಗಿ ಪಾಲಿಕೆಯ ನಿರ್ದೇಶನದಂತೆ ವಿಲೇವಾರಿ ಮಾಡುವುದು.

12. ಒಣತ್ಯಾಜ್ಯವನ್ನು ಒಣತ್ಯಾಜ್ಯ ಸಂಗ್ರಹಣಾ ಘಟಕಕ್ಕೆ ಖಡ್ಡಾಯವಾಗಿ ನೀಡುವುದು ಹಾಗೂ ಹಸಿ ಕಸವನ್ನು ಖಡ್ಡಾಯವಾಗಿ ಕೆ.ಸಿ.ಡಿ.ಸಿ.ಗೆ ನೀಡುವುದು.

13. ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದಲ್ಲಿ ನಿಮಗೆ ನೀಡಿರುವ ಸರಬರಾಜು ಆದೇಶವನ್ನು ಯಾವುದೇ ಮುನ್ಸೂಚನೆ ಇಲ್ಲದೆ ರದ್ದುಗೊಳಿಸಲಾಗುವುದು.

ಕಾರ್ಯಪಾಲಕ ಅಭಿಯಂತರರು,
ಗಾಂಧಿನಗರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Executive Engineer
Gandhinagar Division,
B.B.M.P. Bangalore-20

ಗೆ,

ಮೆ//ಸಪ್ತಗಿರಿ ಕ್ಲೀನಿಂಗ್ ಸರ್ವಿಸಸ್,
#48, 21ನೇ ಅಡ್ಡರಸ್ತೆ, 2ನೇ ಮಹಡಿ,
ಮಾರೇನಹಳ್ಳಿ, ಜೆ.ಪಿ. ನಗರ, 2ನೇ ಫೇಸ್,
ಬೆಂಗಳೂರು-560 078.

ಪ್ರತಿಯನ್ನು:

- ಮಾನ್ಯ ಆಯುಕ್ತರ ಆಪ್ತಕಾರ್ಯದರ್ಶಿಗಳಿಗೆ ಸದರಿ ವಿಷಯವನ್ನು ಮಾನ್ಯ ಆಯುಕ್ತರ ಗಮನಕ್ಕೆ ತರಲು ಕೋರಿ ಸಲ್ಲಿಸಿದೆ.
- ಜಂಟಿ ಆಯುಕ್ತರು (ಪಶ್ಚಿಮ)ರವರ ಅವಗಾಹನೆಗೆ ಸಲ್ಲಿಸಿದೆ.
- ಮುಖ್ಯ ಅಭಿಯಂತರರು (ಪಶ್ಚಿಮ)ರವರ ಅವಗಾಹನೆಗೆ ಸಲ್ಲಿಸಿದೆ.
- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು / ಪರಿಸರ ಅಧಿಕಾರಿಗಳು (ಗಾಂಧಿನಗರ)ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
- ಸಹಾಯಕ ಹಣಕಾಸು ನಿಯಂತ್ರಕರು(ಪಶ್ಚಿಮ) ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
- ಗುತ್ತಿಗೆದಾರರಿಗೆ / ಕಛೇರಿ ಕಡತಕ್ಕೆ.